# ಸಂಘ ಜನನಿ ಶ್ರೀಮಾತೆ

ಸ್ವಾಮಿ ವೀರೇಶಾನಂದ

*ಶ್ರೀಮಾತೆಯವರು ರಾಮಕೃಷ್ಣ ಮಹಾಸಂಘವನ್ನು ಅಗೋಚರವಾಗಿ ಪೋಷಿಸುತ್ತಿರುವ ಮಹಾಶಕ್ತಿ. ಸಂಘದ ಉಗಮ ಮತ್ತು ಬೆಳವಣಿಗೆಯಲ್ಲಿ ಅವರ ಅಪೂರ್ವ ಪಾತ್ರದ ಪರಿಚಯ ಈ ಲೇಖನದ ಮೂಲಕ ನಮಗಾಗುತ್ತದೆ. ಸ್ವಾಮಿ ವೀರೇಶಾನಂದರು " ವಿವೇಕಪ್ರಭ " ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವರು.*

## ಆದರ್ಶದ ಮೂರ್ತರೂಪ

**ಸಂಘೇ ಶಕ್ತಿಃ ಕಲೌ ಯುಗೇ,** ಈ ಕಲಿಯುಗದಲ್ಲಿ ಶಕ್ತಿ ಅಡಗಿರುವುದು ಸಂಘಟನೆಯಲ್ಲಿ ಎಂದು ಒಂದು ಸುಭಾಷಿತ ಹೇಳುತ್ತದೆ. ಯಾವುದೇ ಜೀವನಾದರ್ಶಗಳನ್ನು ಅನುಷ್ಠಾನ ಯೋಗ್ಯವಾಗುವ ರೀತಿಯಲ್ಲಿ ಜನರಲ್ಲಿ ಪ್ರಸಾರ ಮಾಡಬೇಕಾದರೆ ಸಂಘಟನೆ ಅತ್ಯಾವಶ್ಯಕ. ಅದರಂತೆಯೇ ಆ ಸಂಘಟನೆಯ ಹಿಂದೆ ದಾರಿದೀಪವಾಗಿ ಒಂದು ಉದಾತ್ತ ಆದರ್ಶ ಮತ್ತು ಆ ಆದರ್ಶದ ಸಾಕಾರರೂಪವಾದ ಒಬ್ಬ ಮಹಾಪುರುಷ ಇರುವುದೂ ಅನಿವಾರ್ಯ. ಸಫಲ ಸಂಘಟನೆಗಳೆಲ್ಲದರ ಹಿಂದೆ ಇವುಗಳು ಇರುವುದನ್ನು ನಾವು ನೋಡುತ್ತೇವೆ.

ರಾಮಕೃಷ್ಣ ಮಹಾಸಂಘದ ಸೌಭಾಗ್ಯವೇ ಸೌಭಾಗ್ಯ. ಭಗವತ್ಸಾಕ್ಷಾತ್ಕಾರ ಮತ್ತು ಜಗತ್ತಿನ ಹಿತಗಳೆಂಬ ಅತ್ಯುನ್ನತ ಆದರ್ಶವನ್ನು ಇಟ್ಟುಕೊಂಡಿರುವ ಈ ಸಂಘಕ್ಕೆ ಕಾರಣೀಭೂತರಾಗಿ, ಆ ಆದರ್ಶದ ಮೂರ್ತರೂಪವಾಗಿ, ಒಂದಲ್ಲ, ಮೂರು ಜಗಜ್ಜ್ಯೋತಿ ಚೇತನಗಳು ಮಾನವ ರೂಪವನ್ನು ತಳೆದು ಒಂದೇ ಕಾಲಘಟ್ಟದಲ್ಲಿ ಬಾಳಿಬದುಕಿದರು, ಇಡೀ ಪ್ರಪಂಚದ ಆಧ್ಯಾತ್ಮಿಕ ಸ್ತರವನ್ನು ಮೇಲೇರಿಸುವ ಅದ್ಭುತ ಕಾರ್ಯವನ್ನು ಮಾಡಿದರು. ದಿವ್ಯತ್ರಯರಾದ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರೆಂಬುವ ಆ ಮಹಾಚೇತನಗಳೆ ಇಂದಿಗೂ ಈ ಸಂಘವನ್ನು ಕಾಯುತ್ತಿವೆ, ಶಕ್ತಿಯುತವನ್ನಾಗಿ ಮಾಡಿವೆ, ಇದರ ಮೂಲಕ ಮಹೋನ್ನತವಾದ ರೀತಿಯಲ್ಲಿ ಜಗತ್ತಿನ ಹಿತವನ್ನು ಮಾಡಿಸುತ್ತಿವೆ.

ಇವರುಗಳಲ್ಲಿ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಭೂಮಿಕೆ ಪ್ರಜ್ವಲ ಸೂರ್ಯನಂತೆ ಎಲ್ಲರಿಗೂ ವೇದ್ಯವಾಗುವಂಥದ್ದು ಮತ್ತು ಅತಿ ಸ್ಪಷ್ಟವಾದದ್ದು. ಆದರೆ ರಾಮಕೃಷ್ಣ ಮಹಾಸಂಘದ ಉಗಮ ಮತ್ತು ಕಾಲಾಂತರದ ಪುರೋವೃದ್ಧಿಗೆ ಶ್ರೀಮಾತೆಯವರ ಅಸದಳ ಕೊಡುಗೆ, ನಮ್ಮ ಕಣ್ಣಿಗೆ ನೇರವಾಗಿ ಗೋಚರವಾಗುವುದಿಲ್ಲ, ಬುದ್ಧಿಗೆ ಎಟುಕುವುದಿಲ್ಲ. ವನಸುಮದಂತೆ, ಸರಸ್ವತಿಯ ಪ್ರವಾಹದಂತೆ ಗೋಪ್ಯವಾಗಿರುವ ಆ ಮಹಾಚೇತನದ ಜೀವನ, ಸಾಧನೆ, ಪ್ರಾರ್ಥನೆ ಮತ್ತು ಅನುಗ್ರಹಗಳ



ಪ್ರೀತಿಯೇ ನಮ್ಮ ರಕ್ಷಣೆ. ಪ್ರೀತಿಯಿಂದಲೇ ನಮ್ಮ ಸಂಘ ಸ್ಥಾಪನೆಯಾಗಿರುವುದು. — ಶ್ರೀಮಾತೆ ಶಾರದಾದೇವಿ.

ಫಲಶ್ರುತಿಯನ್ನು ನಾವಿಂದು ಹೆಮ್ಮರದಂತೆ ವಿಶ್ವದಾದ್ಯಂತ ಹಮ್ಮಿಕೊಂಡಿರುವ ರಾಮಕೃಷ್ಣ ಮಹಾಸಂಘದ ರೂಪದಲ್ಲಿ ಕಾಣುತ್ತೇವೆ.

## ಶ್ರೀಮಾತೆಯವರ ಪ್ರಾರ್ಥನೆ

ಶ್ರೀರಾಮಕೃಷ್ಣರ ವ್ಯಾಧಿ ಅವರ ಯುವಕ ಶಿಷ್ಯರನ್ನೆಲ್ಲ ಭಾವನಾತ್ಮಕವಾಗಿಯೂ ಸಾಂಘಿಕವಾಗಿಯೂ ಒಂದುಗೂಡಿಸಿತು. ಗುರುದೇವರ ನಿರ್ಯಾಣಾನಂತರ ಅವರ ಆದರ್ಶದ ರೂವಾರಿಗಳಾಗಲು ಸಂನ್ಯಾಸ ವ್ರತವನ್ನು ಅವರೆಲ್ಲ ಸ್ವೀಕರಿಸಿದರು. ಆದರೆ ಆ ಯುವಕರ ಹುಮ್ಮಸ್ಸನ್ನು, ತ್ಯಾಗಬುದ್ಧಿಯನ್ನು ಹುಡುಗಾಟವೆಂದು ಬಗೆದವರೇ ಹೆಚ್ಚು ಮಂದಿ. ಶ್ರೀರಾಮಕೃಷ್ಣರ ಗೃಹಸ್ಥಭಕ್ತರಲ್ಲಿ ಒಂದಿಬ್ಬರನ್ನು ಬಿಟ್ಟರೆ, ಮಿಕ್ಕವರೆಲ್ಲ ಈ ಯುವಸಂನ್ಯಾಸಿಗಳ ನಿರ್ಧಾರ ಯುಕ್ತವಲ್ಲವೆಂದೇ ಪರಿಗಣಿಸಿದ್ದರು. ಆ ಯುವಭಕ್ತರ ಪಾಲಿಗೆ ಅದೊಂದು ವಿಷಮ ಗಳಿಗೆ. ಸ್ವಾಮಿ ವಿವೇಕಾನಂದರು ಆ ದುರವಸ್ಥೆಯ ಕಾಲವನ್ನು. ತಮ್ಮ ಒಂದು ಪ್ರವಚನದಲ್ಲಿ ಹೀಗೆ ಬಣ್ಣಿಸುತ್ತಾರೆ :

"ನಾನು ಎರಡು ಪ್ರಪಂಚಗಳ ನಡುವೆ ನಿಲ್ಲಬೇಕಾಯಿತು. ಒಂದು ಕಡೆ ನನ್ನ ತಾಯಿ ಮತ್ತು ಸಹೋದರರು ಪ್ರಾಣ ಹೋಗುವವರೆಗೆ ಉಪವಾಸ ಮಾಡುವುದನ್ನು ನೋಡಬೇಕಾಗಿತ್ತು. ಮತ್ತೊಂದು ಕಡೆ, ಆ ಮಹಾಪುರುಷನ ಸಂದೇಶವನ್ನು ಭರತಖಂಡದ ಉದ್ಧಾರಕ್ಕೆ ಬೋಧಿಸಬೇಕು ಮತ್ತು ಕಾರ್ಯರೂಪಕ್ಕೆ ತರಬೇಕು. ಇದರಿಂದಾಗಿ ಹಲವು ದಿನಗಳು ನನ್ನ ಮನಸ್ಸಿನಲ್ಲಿ ಹೋರಾಟ ನಡೆಯಿತು. ಹಲವು ವೇಳೆ ಹಗಲುರಾತ್ರಿ ನಾನು ಎಡೆಬಿಡದೆ ಪ್ರಾರ್ಥಿಸುತ್ತಿದ್ದೆ. ಅಬ್ಬ, ಆ ದಿನಗಳ ಹಿಂಸೆ! ನಾನೊಂದು ನರಕದಲ್ಲಿ ವಾಸಿಸುತ್ತಿದ್ದೆ... ನನಗೆ ಸಹಾನುಭೂತಿ

ಯನ್ನು ತೋರುವವರು ಯಾರೂ ಇರಲಿಲ್ಲ, ಒಬ್ಬರ ವಿನಹ. ಆ ಒಬ್ಬರ ಸಹಾನುಭೂತಿ ನನಗೆ ನೆಚ್ಚಿಗೆಯನ್ನು ತಂದಿತು, ಆಶೀರ್ವಾದವನ್ನು ಕರುಣಿಸಿತು. ಆಕೆ ಒಬ್ಬ ಮಹಿಳೆ... " ಶ್ರೀಮಾತೆ ಶಾರದಾದೇವಿಯವರೇ ಆ ಮಹಿಳೆ ಎನ್ನುವುದು ಹಗಲಸೂರ್ಯ ನಂತೆ ಸುಸ್ಪಷ್ಟ. ಹೀಗೆ ಶ್ರೀಮಾತೆಯವರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಪುತ್ರರಿಗೆ ತಾಯಿಯ ಅಕ್ಕರೆಯನ್ನೂ ರಕ್ಷಣೆಯನ್ನೂ ನೀಡಿ, ಶ್ರೀರಾಮಕೃಷ್ಣರ ಜೀವಂತ ಪ್ರತೀಕವಾಗಿ ನಿಂತರು.

ಭಕ್ತ ಸುರೇಂದ್ರನ ಸಹಾಯದಿಂದ ಬಾರಾನಗರದ ಪಾಳು ಮನೆಯೊಂದರಲ್ಲಿ ಮಠ ಆರಂಭಗೊಂಡಿತಾದರೂ, ಗಂಗಾ ತಟದಲ್ಲಿ ಒಂದು ಸ್ಥಾಯೀ ಮಠವನ್ನು ಸ್ಥಾಪಿಸಬೇಕು ಎನ್ನುವುದು ಸ್ವಾಮಿ ವಿವೇಕಾನಂದರ ಕನಸಾಗಿತ್ತು. ಒಪ್ಪತ್ತು ಊಟಕ್ಕೂ ಹೊದೆಯಲು ಮಾರುದ್ದ ಬಟ್ಟೆಗೂ ಕಷ್ಟವಾಗಿದ್ದ ಕಡುಕಾರ್ಪಣ್ಯದ ಆ ದಿನಗಳಲ್ಲಿ, ಶ್ರೀರಾಮಕೃಷ್ಣರಿಗೆ ಯುಕ್ತವಾದ ಒಂದು ದೇವಾಲಯ ಮತ್ತು ಅವರ ಹೆಸರಿನಲ್ಲಿ ಮನೆಬಿಟ್ಟು, ತ್ಯಾಗವ್ರತದೀಕ್ಷಾಧಾರಿಗಳಾದ ಯುವಕರು ನೆಲೆಸಲು ಒಂದು ಜಾಗದ ಕನಸು ನನಸಾಗುವುದಾದರೂ ಹೇಗೆ?

೧೮೯೦ರ ಸಮಯ. ಶ್ರೀಮಾತೆಯವರು ಬುದ್ಧಗಯೆಗೆ ತೀರ್ಥಯಾತ್ರೆಗೆ ಬಂದಿದ್ದಾರೆ. ಅಲ್ಲಿನ ದೊಡ್ಡ ದೊಡ್ಡ ಬೌದ್ಧ ಮಠಗಳನ್ನೂ, ಅಲ್ಲಿ ನೆಲಸಿರುವ ಸಂನ್ಯಾಸಿಗಳ ಸಂಘಬದ್ಧ ಜೀವನವನ್ನೂ ಕಣ್ಣಾರೆ ಕಂಡರು. ಅದನ್ನು ನೋಡಿದ ಆ ದಯಾಪೂರಿತ ಮಾತೃಹೃದಯ ತನ್ನ ಮಕ್ಕಳ ಹೀನದೀನ ಸ್ಥಿತಿಯನ್ನು ನೆನೆದು ಅವರಿಗಾಗಿ ಮಮ್ಮಲ ಮರುಗಿತು. ಕಣ್ಣೀರು ಸುರಿಸುತ್ತ ತಮ್ಮ ಆರಾಧ್ಯದೈವರಾದ ಶ್ರೀರಾಮಕೃಷ್ಣರನ್ನು ಹೀಗೆ ಬೇಡಿಕೊಂಡರು :

"ಠಾಕುರ್, ನೀವು ಭೂಮಿಗೆ ಬಂದು ಲೀಲೆಯನ್ನಾಡಿ, ಆನಂದದಿಂದ ಬಾಳಿ ಹೋಗಿಬಿಟ್ಟಿರಿ. ಅಲ್ಲಿಗೇ ಎಲ್ಲವೂ ಮುಗಿದು ಹೋಯಿತೇ? ಹಾಗಿದ್ದಲ್ಲಿ, ಇಷ್ಟೊಂದು ಕಷ್ಟಪಟ್ಟು ನೀವು ಈ ಜಗತ್ತಿಗೆ ಬರುವ ಆವಶ್ಯಕತೆಯಾದರೂ ಏನಿತ್ತು? ಕಾಶಿ ಬೃಂದಾವನಗಳಲ್ಲಿ ನೋಡಿದೆ, ಅಲ್ಲಿನ ಸಾಧುಗಳು ಭಿಕ್ಷೆ ಪಡೆದು ಉಣ್ಣುತ್ತಾರೆ, ಅಲೆದಾಡಿ ಬಂದು ಮರದ ಕೆಳಗೆ ಬಿಡಾರ ಹೂಡುತ್ತಾರೆ. ಈ ಬಗೆಯ ಸಾಧುಗಳ ಸಂಖ್ಯೆಗೇನು ಕಮ್ಮಿಯೇ, ಬೇಕಾದಷ್ಟಿದ್ದಾರೆ. ಆದರೆ ನಿಮ್ಮ ಹೆಸರಿನಲ್ಲಿ ಸಕಲವನ್ನೂ ತ್ಯಜಿಸಿರುವ ನಿಮ್ಮ ಮಕ್ಕಳು ಒಂದು ತುತ್ತು ಅನ್ನಕ್ಕೂ ಅಲೆದಾಡುವುದನ್ನು ನಾನು ಈ ಕಣ್ಣಿನಿಂದ ನೋಡಲಾರೆ. ನಿಮ್ಮಲ್ಲಿ ನಾನು ಬೇಡುವುದು ಇಷ್ಟೇ. ನಿಮ್ಮ ಪವಿತ್ರ ಹೆಸರನ್ನು ಸ್ಮರಿಸುತ್ತ ತ್ಯಾಗಜೀವನವನ್ನು ಕೈಗೊಳ್ಳಲು ಮುಂದೆ ಬಂದಿರುವವರಿಗೆ ಉಣ್ಣಲು ಸಾಕಷ್ಟು ಆಹಾರ, ತೊಡಲು ವಸ್ತ್ರಗಳ ಅಭಾವ ಎಂದಿಗೂ ಆಗದಿರಲಿ. ಅವರೆಲ್ಲ ನಿಮ್ಮ ಬೋಧನೆಯ ಪ್ರಕಾರ ಸಾಧುಜೀವನ ನಡೆಸುತ್ತ ಒಂದು ಕಡೆ ನೆಲಸಲಿ. ಸಂಸಾರ ದುಃಖದಿಂದ ಬೆಂದ ಜನ ಅವರ ಬಳಿ ಬಂದು, ಅವರ ಮೂಲಕ ನಿಮ್ಮ ಸಂದೇಶವನ್ನು ಆಲಿಸಿ ಶಾಂತಿ ಪಡೆಯಲಿ. ಇದಕ್ಕಾಗಿಯೇ ಅಲ್ಲವೆ, ಗುರುದೇವ, ನೀವು ಅವತರಿಸಿದ್ದು. ಅದನ್ನು ಬಿಟ್ಟು ನಿಮ್ಮ ಮಕ್ಕಳು ಅಲ್ಲಿ ಇಲ್ಲಿ ಅಲೆದಾಡುವುದನ್ನು ಕಂಡು ನನ್ನ ಕರುಳು ಕಿತ್ತುಬರುತ್ತಿದೆ."

ಎಂಥ ಪ್ರಾರ್ಥನೆಯಿದು! ಎಂತಹ ಕಳಕಳಿ! ತಾಯಿಯ ಮಮತೆ ಮತ್ತು ದಯೆ ಅಡಗಿದ್ದವು ಇದರಲ್ಲಿ! ಹಾಗೆಯೇ ಈ ಪ್ರಾರ್ಥನೆ ಅತ್ಯಂತ ಶಕ್ತಿಯುತವೂ ಪ್ರಭಾವಶಾಲಿಯೂ ಆಗಿತ್ತು. ಮುಂದೆ ಶ್ರೀಮಾತೆಯವರೇ ಆ ಪ್ರಾರ್ಥನೆಯ ಫಲದ ಬಗ್ಗೆ ತಮ್ಮ ಭಕ್ತರಿಗೆ ಒಮ್ಮೆ ಹೇಳಿದರು: "ಹೀಗೆ ನಾನು ಗುರುದೇವರಲ್ಲಿ ಬೇಡಿಕೊಂಡ ಫಲವಾಗಿಯೇ, ನರೇಂದ್ರ ನಿಧಾನವಾಗಿ ಇವೆಲ್ಲವನ್ನೂ, ಅಂದರೆ ಮಠ, ಆಶ್ರಮ ಮೊದಲಾದುವುಗಳನ್ನು ಮಾಡಿದ." ಶ್ರೀಮಾತೆಯವರ ಸಹಚಾರಣಿಯಾಗಿದ್ದ ಯೋಗಿನ್ ಮಾ ಮುಂದೊಮ್ಮೆ ಆಗಿನ್ನೂ ಬಾಲಕನಾಗಿದ್ದ ಸ್ವಾಮಿ ಶಾರದೇಶಾನಂದರಿಗೆ ಹೀಗೆ ಹೇಳುತ್ತಾಳೆ: "ಈ ಮಠ, ಆಶ್ರಮ ಇವೆಲ್ಲವನ್ನೂ ನೋಡುತ್ತಿದ್ದೀಯಲ್ಲ, ಇವೆಲ್ಲವೂ ಶ್ರೀಮಾತೆಯವರ ಕೃಪೆಯಿಂದಲೇ ಆದದ್ದು. ಶ್ರೀಮಾತೆಯವರು ಕಲ್ಲುಕರಗುವಂತೆ ಆರ್ತರಾಗಿ ಶ್ರೀರಾಮಕೃಷ್ಣರನ್ನು ಬೇಡಿಕೊಂಡರು, 'ಗುರುದೇವ, ನನ್ನ ಮಕ್ಕಳಿಗೆ ನಿಲ್ಲಲು ಒಂದು ಸೂರು, ಉಣ್ಣಲು ಆಹಾರ ವ್ಯವಸ್ಥೆ ಮಾಡಿಕೊಡು' ಎಂದು. ಅವರ ಬಯಕೆ ಈಗ ಪೂರ್ಣವಾಗಿದೆ."

## ನರೇಂದ್ರನ ತಾಯಿ

ಇಲ್ಲಿ ಒಂದು ಮುಖ್ಯ ಅಂಶವನ್ನು ಗಮನಿಸಬೇಕು. ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರ ನಾಯಕ ನರೇಂದ್ರ, ಅಥವಾ ಸ್ವಾಮಿ ವಿವೇಕಾನಂದರು ಎನ್ನುವುದು ನಿರ್ವಿವಾದದ ವಿಷಯ. ಇದನ್ನು ಇತರೆಲ್ಲರಿಗಿಂತಲೂ ಚೆನ್ನಾಗಿ ತಿಳಿದಿದ್ದವರೆಂದರೆ ಶ್ರೀಮಾತೆ ಶಾರದಾದೇವಿಯವರು. ಅಂತೆಯೇ ತಮ್ಮ ಜ್ಯೇಷ್ಠ ಪುತ್ರನ ಬಗ್ಗೆ ಅವರಿಗೆ ತುಂಬು ಅಕ್ಕರೆ, ಆರೋಗ್ಯದ ವಿಷಯದಲ್ಲಿ ಕಾಳಜಿ. ಪ್ರಾರಂಭದ ದಿನಗಳಲ್ಲಿ ಸ್ವಾಮಿ ವಿವೇಕಾನಂದರಿಗೆ ಪರಿವ್ರಾಜಕ ಜೀವನದ ಆಕರ್ಷಣೆ ಪ್ರಬಲವಾಗಿತ್ತು. ಹರಿಯುವ ನೀರು ಅಲೆದಾಡುವ ಸಾಧು ಕಲುಷಿತಗೊಳ್ಳುವುದಿಲ್ಲ ಎನ್ನುತ್ತದೆ ಗಾದೆಯೊಂದು. ಅದಕ್ಕೆ ಅನುಮತಿ ಪಡೆಯಲು ಶ್ರೀಮಾತೆಯವರ ಹತ್ತಿರ ತಮ್ಮ ಸಹೋದರ ಸಂನ್ಯಾಸಿ ಸ್ವಾಮಿ ಅಖಂಡಾನಂದರ ಒಡಗೂಡಿ ಅವರು ಬರುತ್ತಾರೆ. ಪ್ರಿಯಪುತ್ರನ ಅಗಲಿಕೆಯಿಂದ ದುಃಖವಾದರೂ ಇದಕ್ಕೆ ಒಪ್ಪಿಗೆ ಕೊಡುತ್ತಾರೆ ಶ್ರೀಮಾತೆಯವರು. ಹಾಗೂ ಸ್ವಾಮಿ ಅಖಂಡಾನಂದರತ್ತ ತಿರುಗಿ ಹೇಳುತ್ತಾರೆ, "ನಿನ್ನ ಕೈಯಲ್ಲಿ ನನ್ನ ಸರ್ವಸ್ವವನ್ನೂ ಇಡುತ್ತಿದ್ದೇನೆ. ನರೇಂದ್ರನಿಗೆ ತಿನ್ನುಣ್ಣಲು ಕಷ್ಟವಾಗದಂತೆ ನೋಡಿಕೊ" ಎಂದು.

ಭಾರತದಾದ್ಯಂತ ಸಂಚರಿಸಿ ಕಡೆಗೆ ಚೆನ್ನೈ ತಲುಪಿದ ಸ್ವಾಮಿ ವಿವೇಕಾನಂದರನ್ನು ಅಲ್ಲಿನ ಉತ್ಸಾಹಿ ಯುವವೃಂದ ಅಮೆರಿಕದ ಚಿಕಾಗೋ ಪಟ್ಟಣದಲ್ಲಿ ಜರುಗಲಿರುವ ಸರ್ವಧರ್ಮ ಸಮ್ಮೇಳನ

ದಲ್ಲಿ ಹಿಂದೂಧರ್ಮದ ಪ್ರತಿನಿಧಿಯಾಗಿ ಪಾಲ್ಗೊಳ್ಳಬೇಕೆಂದು ಒತ್ತಾಯಿಸಿತು. ದೈವಸಂಕಲ್ಪವನ್ನು ಅರಿಯದೆ ಏನನ್ನೂ ಕೈಗೊಳ್ಳುವವರಲ್ಲ ಸ್ವಾಮೀಜಿಯವರು. ಈ ವಿಷಯದಲ್ಲಿ ತಮ್ಮ ಗುರುದೇವರ ಇಚ್ಛೆಯೇನು ಎಂದು ತಿಳಿಯದೆ ಅವರು ತೊಳಲಾಡಿದರು. ಆಗ ಶ್ರೀಮಾತೆಯವರ ಜ್ಞಾಪಕ ಬಂದಿತು. ಗುರುದೇವರ ಪ್ರತಿಕೃತಿಯಲ್ಲವೇ ಶ್ರೀಮಾತೆಯವರು! ತಮ್ಮ ಸಂದಿಗ್ಧ ಪರಿಸ್ಥಿತಿಯನ್ನು ವಿವರಿಸಿ ಶ್ರೀಮಾತೆಯವರಿಗೆ ಕಾಗದ ಬರೆದರು. ಸುಶಿಕ್ಷಿತ ಸ್ವಾಮಿ ವಿವೇಕಾನಂದರು, ಅಮೆರಿಕ ಎನ್ನುವ ದೇಶವಿದೆಯೆಂದೂ ತಿಳಿಯದೇ ಇರಬಹುದಾದ ಗ್ರಾಮೀಣ ಮಹಿಳೆಯ ಸಲಹೆಯನ್ನು ಯಾಚಿಸಿದರು. ಎಂತಹ ಅದ್ಭುತ! ಪತ್ರಕ್ಕೆ ಉತ್ತರವನ್ನು ಕಾತರದಿಂದ ಎದುರು ನೋಡುತ್ತಿರುವಾಗಲೇ, ಶ್ರೀರಾಮಕೃಷ್ಣರು ಕಡಲಿನ ಅಲೆಗಳ ಮೇಲೆ ನಡೆದುಕೊಂಡು ಪಶ್ಚಿಮ ದಿಕ್ಕಿನೆಡೆಗೆ ಹೋಗುತ್ತ ತನ್ನನ್ನು ಹಿಂಬಾಲಿಸುವಂತೆ ಸಂಜ್ಞೆ ಮಾಡುತ್ತಿರುವ ಅಪೂರ್ವ ಸ್ವಪ್ನವೊಂದನ್ನು ಕಂಡರು. ಕೆಲದಿನಗಳಲ್ಲಿಯೇ ಅಮೆರಿಕೆಗೆ ಹೋಗಲು ಶ್ರೀಮಾತೆಯವರ ಅನುಮತಿ ಮತ್ತು ಅವರ ಕಾರ್ಯಕ್ಕೆ ಆಶೀರ್ವಾದಗಳನ್ನೊಳಗೊಂಡ ಪತ್ರವೂ ತಲುಪಿತು. ಸ್ವಾಮೀಜಿ ಸಮಾಧಾನದ ಉಸಿರನ್ನು ಬಿಟ್ಟು ಉದ್ಗರಿಸಿದರು : "ಆಹಾ, ಈಗ ಎಲ್ಲವೂ ಸರಿಯಾಯಿತು. ಮಾತೆಯವರ ಇಚ್ಛೆಯನ್ನು ನಾನು ತಿಳಿದುಕೊಂಡೆ."

> ಅನಾಶ್ರಿತರ, ವೃದ್ಧ ಮಹಿಳೆಯರ ಶುಶ್ರೂಷೆ ಮಾಡುವುದೆಂದರೆ ಭಗವಂತನ ಸೇವೆ ಮಾಡಿದಂತೆಯೆ. ಎಂಥ ಉದಾತ್ತ ಕಾರ್ಯವನ್ನು ಈ ಹುಡುಗರು (ರಾಮಕೃಷ್ಣ ಸಂಘದ ಸಂನ್ಯಾಸಿಗಳು) ಮಾಡುತ್ತಿರುವರು!
>
> — *ಶ್ರೀಮಾತೆ ಶಾರದಾದೇವಿ.*

ಸ್ವಾಮಿ ವಿವೇಕಾನಂದರು ಭಾರತಕ್ಕೆ ಹಿಂತಿರುಗಿದ ಮೇಲೆ ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದರು. ಪಾಶ್ಚಾತ್ಯ ರೀತಿಯ ಈ ಬಗೆಯ ಕಾರ್ಯವಿಧಾನ ಅವರ ಸಹೋದರ ಸಂನ್ಯಾಸಿಗಳಲ್ಲೂ ಕೂಡ ಕೆಲವರಿಗೆ ಇದು ಶ್ರೀರಾಮಕೃಷ್ಣರ ಬೋಧನೆಯ ಪ್ರಕಾರ ನಡೆಯುತ್ತಿರುವ ಕಾರ್ಯವೇ ಎಂಬ ಸಂದೇಹವನ್ನು ಮೂಡಿಸಿತು. ಏನಾದರೂ ಆಗಲಿ, ಮೊದಲಿನಿಂದಲೂ ಸ್ವಾಮೀಜಿಯವರು ಕೈಗೊಂಡ ಎಲ್ಲ ಕಾರ್ಯಗಳಿಗೂ ಶ್ರೀಮಾತೆಯವರು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು. "ನರೇಂದ್ರನು ಮಾಡುತ್ತಿರುವುದೆಲ್ಲವೂ ಶ್ರೀರಾಮಕೃಷ್ಣರ ಕೆಲಸವೇ, ಅದನ್ನು ಬಿಟ್ಟು ಮತ್ತಿನ್ನೇನನ್ನೂ ಅವನು ಮಾಡುತ್ತಿಲ್ಲ" ಎನ್ನುವುದು ಅವರ ದೃಢ ವಿಶ್ವಾಸವಾಗಿತ್ತು.

ರಾಮಕೃಷ್ಣ ಮಹಾಸಂಘದಲ್ಲಿ ಕರ್ಮಯೋಗಕ್ಕೆ ಸ್ವಾಮಿ ವಿವೇಕಾನಂದರು ಹೆಚ್ಚು ಪ್ರಾಮುಖ್ಯ ಕೊಟ್ಟರು. ಅದು ಕೆಲವರಿಗೆ ರುಚಿಸಲಿಲ್ಲ. ಧ್ಯಾನಜಪಗಳಲ್ಲಿ ಮಗ್ನರಾಗಿರಬೇಕೆಂಬುದು ಅವರ ಇಚ್ಛೆ. ಶ್ರೀಮಾತೆಯವರು ಹೇಳುತ್ತಾರೆ : "ನೀವು ಇಪ್ಪತ್ತನಾಲ್ಕು ಗಂಟೆಯೂ ಧ್ಯಾನದಲ್ಲಿ ತೊಡಗಿರಲು ಸಾಧ್ಯವೇನು? ಕೆಲಸ ಮಾಡಿದರೆ ಮನಸ್ಸು ಚುರುಕಾಗಿರುತ್ತದೆ. ಅದಕ್ಕೆಂದೇ ನನ್ನ ನರೇಂದ್ರ ಈ ಎಲ್ಲ ಆಶ್ರಮಗಳನ್ನು ಕಟ್ಟಿ ಚಟುವಟಿಕೆಗಳನ್ನು ಆರಂಭಿಸಿದ್ದಾನೆ. ಅಷ್ಟಕ್ಕೂ ನೀವು ಮಾಡುವ ಕೆಲಸ ಶ್ರೀಗುರುದೇವರ ಕಾರ್ಯ ತಾನೇ." ಹೀಗೆ ಸ್ವಾಮೀಜಿಯವರ ಕಾರ್ಯವಿಧಾನಕ್ಕೆ ಸಂಪೂರ್ಣ ಸಹಮತಿಯನ್ನು ಶ್ರೀಮಾತೆಯವರು ಸೂಚಿಸುತ್ತಿದ್ದರು. ಅಷ್ಟೇ ಅಲ್ಲ, "ಈ ಮಠ ಹೀಗೇ ನಡೆಯುವುದು. ಇದಕ್ಕೆ ಬದ್ಧರಾಗಿ ನಡೆದುಕೊಳ್ಳಲು ಆಗದವರು ಹೊರಕ್ಕೆ ಹೋಗಬಹುದು" ಎಂದು ಒಮ್ಮೆ ನಿರ್ದಾಕ್ಷಿಣ್ಯವಾಗಿ ಹೇಳಿದರು.

## ಕನಸಿನ ಸಾಕಾರ

೧೮೯೭ರಲ್ಲಿ ಗಂಗೆಯ ಪಶ್ಚಿಮ ತಟದ ಬೇಲೂರು ಗ್ರಾಮದಲ್ಲಿ ಜಮೀನನ್ನು ಕೊಂಡು ಮಠವನ್ನು ಕಟ್ಟುವ ಕೆಲಸ ಆರಂಭವಾಯಿತು. ಆದರೆ ಸ್ವಾಮಿ ವಿವೇಕಾನಂದರಿಗೆ ಆ ಜಾಗವನ್ನು ಶ್ರೀಮಾತೆಯವರಿಗೆ ತೋರಿಸದೆ ತೃಪ್ತಿಯಿಲ್ಲ. ಸ್ವತಃ ಸ್ವಾಮೀಜಿಯೇ ಅವರನ್ನು ಕರೆದುಕೊಂಡು ಜಮೀನನ್ನೆಲ್ಲ ಸುತ್ತಾಡಿ ತೋರಿಸಿದರು. ಸಾಷ್ಟಾಂಗ ಪ್ರಣಾಮ ಮಾಡಿ, ಕಣ್ಣೀರು ಸುರಿಸುತ್ತ, ಕೈಗಳನ್ನು ಜೋಡಿಸಿ ಹೀಗೆಂದರು : "ಅಮ್ಮ, ಇಷ್ಟು ದಿನಗಳಾದ ಮೇಲೆ ನನ್ನ ಮನಸ್ಸಿನಲ್ಲಿ ಯಾವ ಉತ್ಕಟ ಆಕಾಂಕ್ಷೆ ಇತ್ತೋ ಅದು ಇಂದು ಸಾಕಾರವಾಯಿತು. ಅದೇನೆಂದರೆ ನಿಮಗೆ ನಿಮ್ಮ ಸ್ವಂತ ಜಾಗವನ್ನು ಸಂಪಾದಿಸಿಕೊಡಬೇಕು ಎಂದು. ಈಗ ನೀವು ಈ ಜಮೀನಿನುದ್ದಕ್ಕೂ ನಿಸ್ಸಂಕೋಚವಾಗಿ ಸುತ್ತಾಡಿರಿ, ಸುತ್ತಿ ಸುತ್ತಿ ನೋಡಿರಿ."

ಇಲ್ಲಿ ಸ್ವಂತ ಜಾಗ ಎಂದು ಸ್ವಾಮೀಜಿ ಹೇಳಿದ್ದನ್ನು ಗಮನಿಸಬೇಕು. ಶ್ರೀಮಾತೆಯವರು ಸಂಘಜನನಿಯಲ್ಲವೇ, ಹಾಗಾದರೆ ಅದು ಶ್ರೀಮಾತೆಯವರ ಸ್ವಂತ ಜಾಗವೇ ಆಯಿತಲ್ಲವೇ? ಆ ಜಾಗ ಶ್ರೀಮಾತೆಯವರಿಗೆ ಚೆನ್ನಾಗಿ ಹಿಡಿಸಿತು. ಆ ಜಮೀನಿನ ಸಂಬಂಧವಾಗಿ ಮುಂದೊಮ್ಮೆ ಶ್ರೀಮಾತೆಯವರು ತಮ್ಮ ಭಕ್ತರಿಗೆ ಹೇಳುತ್ತಾರೆ : "ನಾನು ಹಿಂದೆ ಮತ್ತೆ ಮತ್ತೆ ಒಂದು ದರ್ಶನವನ್ನು ಕಾಣುತ್ತಿದ್ದೆ. ಶ್ರೀರಾಮಕೃಷ್ಣರು ಈಗ ಬೇಲೂರು ಮಠವಿರುವ ಜಾಗದಲ್ಲಿಯೇ, ಸರಿಯಾಗಿ ಈಗ ಮಂದಿರವಿರುವ ಜಾಗದಲ್ಲಿಯೇ ವಾಸಮಾಡುತ್ತಿದುದನ್ನು." ಕಡೆಗೂ ಶ್ರೀರಾಮಕೃಷ್ಣರ ಮಕ್ಕಳಿಗೆ ನೆಲಸಲು ಒಂದು ಜಾಗ ಸಿಕ್ಕಿದ್ದನ್ನು ಕಂಡು ಶ್ರೀಮಾತೆಯವರಿಗೆ ಎಂತಹ ಆನಂದ! ಅವರು ಉದ್ಗರಿಸಿದರು "ಆಹಾ, ಈ ಮಕ್ಕಳಿಗೆ ಕಡೆಗೂ ತಲೆಗೊಂದು ಸೂರು ದೊರಕಿತಲ್ಲಾ, ಶ್ರೀರಾಮಕೃಷ್ಣರಿಗೂ ಒಂದು ಸ್ಥಾನವಾಯಿತಲ್ಲಾ" ಎಂದು.

## ಸಂಘ ಜನನಿ ಶ್ರೀಮಾತೆ

ಮೇ ೧, ೧೮೯೭ರಲ್ಲಿ ಸ್ವಾಮಿ ವಿವೇಕಾನಂದರು ಭಕ್ತ ಬಲರಾಮ ಬೋಸನ ಮನೆಯಲ್ಲಿ ಶ್ರೀರಾಮಕೃಷ್ಣರ ಗೃಹಸ್ಥ ಮತ್ತು ಸಂನ್ಯಾಸೀ ಭಕ್ತವೃಂದದ ಸಭೆಯೊಂದನ್ನು ನಡೆಸಿ, ರಾಮಕೃಷ್ಣ ಮಿಷನ್ನಿನ ಸ್ಥಾಪನೆಗೆ ಚಾಲನೆಯಿತ್ತರು. ಆ ಸಂದರ್ಭದಲ್ಲಿ ಮಾತನಾಡುತ್ತ ಹೀಗೆ ಹೇಳಿದರು : "ಶ್ರೀಮಾತೆಯವರು

ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿರುವುದರಿಂದ ನಮ್ಮ ಗುರುಪತ್ನಿಯ ದೃಷ್ಟಿಯಿಂದ ಮಾತ್ರವೇ ಅವರನ್ನು ನಾವು ಗೌರವಿಸುತ್ತಿದ್ದೇವೆ ಎಂದುಕೊಂಡಿರೇನು? ಸಹೋದರರೇ, ಅವರು ಕೇವಲ ಅಷ್ಟು ಮಾತ್ರವಲ್ಲ, ಯಾವ ನಮ್ಮ ಸಂಘ ಆರಂಭಗೊಂಡು ನಡೆಯುತ್ತಿದೆಯೋ, ಅದರ ರಕ್ಷಾಕರ್ತ್ರಿಯಾಗಿದ್ದಾರೆ ಅವರು, ಪಾಲನಕರ್ತ್ರಿಯೂ ಆಗಿದ್ದಾರೆ. ಅವರು ನಮ್ಮ ಸಂಘ ಜನನಿ."

**ಶ್ರೀಮಾತೆಯವರ ಆದೇಶವನ್ನು ಪಾಲಿಸುವುದಷ್ಟೇ ನಮ್ಮ ಧರ್ಮ, ನಮ್ಮ ಕರ್ಮವೂ ಕೂಡ. ನಾವು ಬರಿಯ ಯಂತ್ರ, ಆಕೆ ಯಂತ್ರ ನಡೆಸುವವರು. — *ಸ್ವಾಮಿ ಪ್ರೇಮಾನಂದ.***

ಸ್ವಾಮೀಜಿ ೧೯೦೧ರಲ್ಲಿ ಬೇಲೂರು ಮಠದಲ್ಲಿ ದುರ್ಗಾ ಪೂಜೆಯನ್ನು ಆರಂಭಿಸಿದರು. ಆ ಪೂಜೆಯ ಸಂಕಲ್ಪವನ್ನು ಶ್ರೀಮಾತೆಯವರ ಹೆಸರಿನಲ್ಲಿಯೇ ಮಾಡಿಸಿದರು. ಆಗ ಅಲ್ಲಿನ ಪದ್ಧತಿಯಂತೆ ನವಮಿ ಪೂಜೆಯ ದಿನದಂದು ಪ್ರಾಣಿಬಲಿಯನ್ನು ನೀಡಬೇಕೆಂದು ಅವರ ಇಚ್ಛೆ. ಅದಕ್ಕೆ ಶ್ರೀಮಾತೆಯವರು ಸಮ್ಮತಿಸಲಿಲ್ಲ. ಅವರು ಹೀಗೆ ಹೇಳಿದರು : "ಮಗೂ, ಮಠದಲ್ಲಿ ದುರ್ಗಾಪೂಜೆಯನ್ನು ಮಾಡಿ ಶಕ್ತಿಯ ಆರಾಧನೆ ಗೈಯಬೇಕೆಂಬುದು ಸರಿಯಾದುದೇ. ಶಕ್ತಿಯ ಆರಾಧನೆ ಮಾಡದೆ ಜಗತ್ತಿನಲ್ಲಿ ಯಾವ ಕಾರ್ಯ ತಾನೇ ಸಂಪನ್ನವಾಗುತ್ತದೆ ? ಆದರೆ ಮಗೂ, ಬಲಿ ಕೊಡುವುದು ಬೇಡ. ಪ್ರಾಣಿಹತ್ಯೆ ಮಾಡುವುದು ಬೇಡ." ಶ್ರೀರಾಮಕೃಷ್ಣರನ್ನೇ ವಾದದಲ್ಲಿ ಎದುರಿಸುತ್ತಿದ್ದ ಸ್ವಾಮೀಜಿ ನಿರುತ್ತರರಾದರು. ಮಾತೆಯ ಆದೇಶವನ್ನು ಸಂಪೂರ್ಣವಾಗಿ ಪಾಲಿಸಿದರು.

ಕಲ್ಕತ್ತೆಯಲ್ಲಿ ಪ್ಲೇಗಿನ ಪಿಡುಗು ಉಂಟಾದಾಗ ಮಾಡಿದ ಪರಿಹಾರ ಕಾರ್ಯ ರಾಮಕೃಷ್ಣ ಮಿಷನ್ನಿನ ಪ್ರಥಮ ವೈದ್ಯಕೀಯ ಸೇವೆ ಎನಿಸಿದೆ. ಆ ಕಾರ್ಯದ ವ್ಯಾಪ್ತಿ ದಿನದಿನಕ್ಕೆ ಹೆಚ್ಚಾಗುತ್ತ ಹೋಗಿ, ಹಣ ಮತ್ತು ಸಂಪನ್ಮೂಲಗಳ ಅಭಾವ ತಲೆದೋರಿತು. ಆಗ ಸ್ವಾಮಿ ವಿವೇಕಾನಂದರು ಪ್ಲೇಗ್ ಪರಿಹಾರಕ್ಕೆ ಬೇಕಾದ ಹಣವನ್ನು ಬೇಲೂರು ಮಠದ ಜಾಗವನ್ನು ಮಾರಾಟಮಾಡಿಯಾದರೂ ಹೊಂದಿಸಬೇಕು ಎನ್ನುವ ಕಠೋರ ನಿರ್ಧಾರಕ್ಕೆ ಬಂದಿದ್ದರು. ಆದರೆ ಆ ಪ್ರಸ್ತಾಪವನ್ನು ಶ್ರೀಮಾತೆಯವರು ನಿರಾಕರಿಸಿದ್ದರಿಂದ ಮಾರಾಟವಾಗಲಿಲ್ಲ. ಅವರು ಸ್ವಾಮೀಜಿಗೆ ಹೇಳಿದರು : "ಇದು ಏನು ಮಗು, ಬೇಲೂರು ಮಠವನ್ನೇ ಮಾರಾಟ ಮಾಡಿಬಿಡುತ್ತೀಯೇನು? ಮಠದ ಸ್ಥಾಪನೆಯ ಸಮಯದಲ್ಲಿ ನನ್ನ ಹೆಸರಿನಲ್ಲಿ ಸಂಕಲ್ಪ ನಡೆದಿದೆ. ಶ್ರೀರಾಮಕೃಷ್ಣರ ಹೆಸರಿನಲ್ಲಿ ಕಾರ್ಯ ನಡೆಯುತ್ತಿದೆ. ಹೀಗಿರಬೇಕಾದರೆ ಈ ಜಾಗವನ್ನು ವಿಕ್ರಯಿಸಲು ನಿನಗೆ ಅಧಿಕಾರ ತಾನೇ ಎಲ್ಲಿದೆ ?" ಶ್ರೀಮಾತೆಯವರಿಗೆ ಚೆನ್ನಾಗಿ ಗೊತ್ತಿತ್ತು, ಮಠ ಸ್ಥಾಪಿತವಾದರೇನೇ ಅನೇಕ ಜನಹಿತಕಾರ್ಯಗಳು ಬಹಳ ಕಾಲದವರೆಗೂ ನಡೆದುಕೊಂಡು ಹೋಗುತ್ತವೆ. ಆದ್ದರಿಂದ ತಾತ್ಕಾಲಿಕ ಸೇವಾಕಾರ್ಯದ ನಿಮಿತ್ತ ಸ್ಥಾಯೀ ಸೇವಾಕೇಂದ್ರವನ್ನು ಮುಚ್ಚಬಾರದು ಎಂದು. ಸ್ವಾಮೀಜಿ ಭಾವಾವೇಶದ ಭರದಿಂದ ಮಾತ್ರ ಈ ನಿರ್ಧಾರ ಕೈಗೊಂಡಿದ್ದರು. ಅದೃಷ್ಟಕ್ಕೆ, ಪ್ಲೇಗ್ ಪರಿಹಾರ ಕಾರ್ಯಕ್ಕೆ ಬೇಕಾದ ಧನ ಇತರ ಮೂಲಗಳಿಂದ ದೊರಕಿತು.

ಹೀಗೆ ಶ್ರೀಮಾತೆಯವರು ಸಂಘದ ಅನುದಿನದ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸದಿದ್ದರೂ, ಅವರ ಆಶೀರ್ವಾದ ಮತ್ತು ಕಾಲಕಾಲಕ್ಕೆ ಮಾರ್ಗದರ್ಶನ ಸಂಘಕ್ಕೆ ಲಭಿಸುತ್ತಲೇ ಇತ್ತು. ಸಂಘದ ಸದಸ್ಯರೆಲ್ಲರೂ ಶ್ರೀಮಾತೆಯವರು ಶ್ರೀರಾಮಕೃಷ್ಣರಿಂದ ಅಭಿನ್ನ ಎಂದು ನೋಡುತ್ತಿದ್ದುದರಿಂದ, ಶ್ರೀಮಾತೆಯವರ ಒಂದು ಚಿಕ್ಕ ಮಾತೂ ಅವರ ಪಾಲಿಗೆ ವೇದವಾಕ್ಯವೇ ಆಗಿತ್ತು. ಶ್ರೀಮಾತೆಯವರ ಇಚ್ಛೆಯನ್ನು ಪೂರ್ಣಗೊಳಿಸಲು ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಿಂದ ಹಿಡಿದು ಎಲ್ಲರೂ ಕಟಿಬದ್ಧರಾಗಿದ್ದರು. ಸ್ವಾಮಿ ವಿವೇಕಾನಂದರು ಭಕ್ತ ಬಲರಾಮ ಬಸುವಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಹೇಳುತ್ತಾರೆ: "ಶ್ರೀಮಾತೆಯವರ ಇಚ್ಛೆ ಏನಿದೆಯೋ ಅದರ ಪ್ರಕಾರವೇ ನೀವೆಲ್ಲ ನಡೆದುಕೊಳ್ಳಿರಿ. ನಾನೊಬ್ಬ ಅಧಮ ಮನುಷ್ಯ, ಈ ವಿಷಯದಲ್ಲಿ ನಾನು ಏನನ್ನು ತಾನೇ ಹೇಳಬಲ್ಲೆ."

**ಕಮಲಪತ್ರದ ಮೇಲಿನ ನೀರಿನ ಹನಿಯಂತೆ ಎಲ್ಲ ಕಡೆಯಲ್ಲೂ ಪ್ರಪಂಚವನ್ನು ಮುಟ್ಟಿದರೂ ಅದರ ಕಲುಷತೆ ಶ್ರೀಮಾತೆಯವರಿಗೆ ಸೋಂಕುವುದೇ ಇಲ್ಲ. ಅವರು ನಿಜವಾಗಿಯೂ ಮಠದ ಅಧ್ಯಕ್ಷಿಣಿ, ಆದರೂ ಮಗುವಿನಂತಿದ್ದರು.**
***— ಸೋದರಿ ನಿವೇದಿತಾ***

ಒಮ್ಮೆ ಸ್ವಾಮಿ ವಿವೇಕಾನಂದರು ಬೇಲೂರು ಮಠದಲ್ಲಿದ್ದ ಸೇವಕನೊಬ್ಬನನ್ನು ಕಳವು ಮಾಡಿದ ಅಪರಾಧಕ್ಕಾಗಿ ಕೆಲಸದಿಂದ ತೆಗೆದುಹಾಕಿಬಿಟ್ಟರು. ಅವನು ಕಲ್ಕತ್ತೆಯ ಉದ್ಬೋಧನದಲ್ಲಿ ತಂಗಿದ್ದ ಶ್ರೀಮಾತೆಯವರ ಹತ್ತಿರ ಬಂದು, ತನ್ನ ಸಂಕಷ್ಟವನ್ನೆಲ್ಲ ಹೇಳಿಕೊಂಡು, ಕ್ಷಮೆ ಬೇಡುತ್ತಾನೆ. ಆ ಸಮಯದಲ್ಲಿಯೆ ಸ್ವಾಮಿ ಪ್ರೇಮಾನಂದರೂ ಅಲ್ಲಿದ್ದರು. ಅವರಿಗೆ ಈತನನ್ನು ಕೆಲಸಕ್ಕೆ ವಾಪಸು ಕರೆಸಿಕೊಳ್ಳುವಂತೆ ಶ್ರೀಮಾತೆ ಹೇಳುತ್ತಾರೆ. ಸ್ವಾಮೀಜಿಯವರ ಕ್ರೋಧದ ಅರಿವಿದ್ದ ಸ್ವಾಮಿ ಪ್ರೇಮಾನಂದರು ಇದು ಸ್ವಾಮೀಜಿಯವರ ನಿರ್ಧಾರ ಎಂದು ಹೇಳಿದಾಗ ಶ್ರೀಮಾತೆಯವರು ದೃಢವಾದ ಧ್ವನಿಯಲ್ಲಿ ಹೇಳುತ್ತಾರೆ : "ನಾನು ಹೇಳುತ್ತಿದ್ದೇನೆ, ಇವನನ್ನು ಕೆಲಸಕ್ಕೆ ತೆಗೆದುಕೋ." ಸ್ವಾಮಿ ವಿವೇಕಾನಂದರೂ ಈ ನಿರ್ಧಾರಕ್ಕೆ ತಲೆಬಾಗಲೇ ಬೇಕಾಯಿತು.

ಸ್ವಾಮಿ ಶಿವಾನಂದರು ಮಠದ ಮ್ಯಾನೇಜರ್ ಆಗಿದ್ದ ಸಮಯ. ಒಬ್ಬ ಬ್ರಹ್ಮಚಾರಿ ಏನೋ ತಪ್ಪುಮಾಡಿ, ಶಿವಾನಂದಜಿಯವರ ಕೋಪಕ್ಕೆ ಭಯಪಟ್ಟು, ಶ್ರೀಮಾತೆಯವರ ಬಳಿ ಆಶ್ರಯ ಪಡೆಯುತ್ತಾನೆ. ಶ್ರೀಮಾತೆಯವರು ಶಿವಾನಂದರಿಗೆ ಪತ್ರ ಬರೆದು ಅವನನ್ನು ಪುನಃ ಮಠಕ್ಕೆ ಕಳುಹಿಸಿಕೊಡುತ್ತಾರೆ. ಆ ಬ್ರಹ್ಮಚಾರಿ ಮಠಕ್ಕೆ ವಾಪಸ್ಸು ಬಂದಾಗ ಶಿವಾನಂದಜಿ ಅವನಿಗೆ

ಹೇಳುತ್ತಾರೆ: "ಮಗೂ, ನನ್ನ ಹೆಸರಿನಲ್ಲಿ ಸುಪ್ರೀಂಕೋರ್ಟಿನಲ್ಲಿಯೆ ದಾವೆ ಹೂಡಿಬಿಟ್ಟೆಯೇನು? "

**ಸಂಘಗುರು**

ಶ್ರೀರಾಮಕೃಷ್ಣ ಮಹಾಸಂಘದ ಅನೇಕ ಸಂನ್ಯಾಸಿಗಳಿಗೆ ಮತ್ತು ಭಕ್ತರಿಗೆ ಶ್ರೀಮಾತೆಯವರು ದೀಕ್ಷಾಗುರು. ಸ್ವಾಮಿ ಬ್ರಹ್ಮಾನಂದರು ಮತ್ತಿತರರು ಮಂತ್ರದೀಕ್ಷೆ ಕೊಡಲು ಹಿಂಜರಿಯುತ್ತಿದ್ದ ಅನೇಕ ಪಾಪಿತಾಪಿ ಜನರಿಗೆ ಶ್ರೀಮಾತೆಯವರು ತಮ್ಮ ಮಡಿಲಿನಲ್ಲಿ ಆಶ್ರಯವನ್ನಿತ್ತರು. ಸ್ವಾಮಿ ಪ್ರೇಮಾನಂದರು ಹೇಳುತ್ತಿದ್ದರು, "ನಾವು ಜೀರ್ಣಿಸಿಕೊಳ್ಳಲಾಗದ ವಿಷವನ್ನು ಶ್ರೀಮಾತೆಯವರ ಬಳಿಗೆ ಕಳುಹಿಸುತ್ತೇವೆ" ಎಂದು. ಶ್ರೀಮಾತೆಯವರು ತಮ್ಮ ಆಧ್ಯಾತ್ಮಿಕ ಸಂತಾನದ ಓರೆಕೋರೆಗಳನ್ನು ಗಣನೆಗೆ ತೆಗೆದುಕೊಳ್ಳದೆ, ಎಲ್ಲರ ಮೇಲೂ ಕೃಪೆಯ ಪ್ರವಾಹವನ್ನೇ ಹರಿಸಿದರು. ಇದರಿಂದಾಗಿ ದೈಹಿಕವಾಗಿ ಅವರು ಬಹಳ ಕಷ್ಟಪಡಬೇಕಾಯಿತು. ಆದರೂ ಅವರ ಮಾತೃಹೃದಯ ಆ ನೋವನ್ನು ಗೋಪ್ಯವಾಗಿ ಅನುಭವಿಸಿ, ಹೊರಗೆ ಕೇವಲ ಸಾಂತ್ವನದ ಸುಧೆಯನ್ನೇ ಹರಿಸುತ್ತಿತ್ತು.

ಹೀಗೆ ಹಲವಾರು ವರ್ಷಗಳ ಕಾಲ ಸಾಧಾರಣ ಗೃಹಸ್ಥರಿಂದ ಹಿಡಿದು, ಮಿಷನ್ನಿನ ಸಾಧುಗಳವರೆಗೆ ಸಾವಿರಾರು ಜನರು ಶ್ರೀಮಾತೆಯವರಿಂದ ಅನುಗ್ರಹ ಪಡೆದು ತಮ್ಮ ಜೀವನವನ್ನು ಧನ್ಯವನ್ನಾಗಿ ಮಾಡಿಕೊಂಡಿದ್ದಾರೆ. ಅವರೆಲ್ಲ ರಾಮಕೃಷ್ಣ ಮಹಾಸಂಘಕ್ಕೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅಸದಳ ಸೇವೆಯನ್ನು ಸಲ್ಲಿಸಿ ಅದನ್ನು ಸುಸಂಪನ್ನವಾಗಿ ಮಾಡಿದ್ದಾರೆ. ಅಂತಹ ಆಧ್ಯಾತ್ಮಿಕ ಸಂತಾನದ ಪರಿಪಾಲನೆಯೇ ಮಹಾಸಂಘದ ಪುರೋವೃದ್ಧಿಗಾಗಿ ಶ್ರೀಮಾತೆಯವರು ನೀಡಿದ ಮಹತ್ವದ ಕೊಡುಗೆಯಾಗಿದೆ.

**ಉಪಸಂಹಾರ**

ಮಾತೃಸ್ನೇಹವನ್ನು ಯಥೇಚ್ಛವಾಗಿ ದಯಪಾಲಿಸಿದರೆಂದೇ ಶ್ರೀಮಾತೆಯವರು ಸಂಘಜನನಿ ಎನ್ನಿಸಿಕೊಳ್ಳಲಿಲ್ಲ. ಮಗುವನ್ನು ತಾಯಿ ಕೈಹಿಡಿದು ಕರೆದೊಯ್ಯುವಂತೆ ಸಂಘವನ್ನು ನಿರ್ದಿಷ್ಟ ಮಾರ್ಗದಲ್ಲಿ ಅವರು ನಡೆಸಿದರು. ಅದಕ್ಕೇ ಅವರು ಸಂಘಜನನಿ. ತಾವು ಸ್ವತಃ ಆದರ್ಶಜೀವನವನ್ನು ನಡೆದು ತೋರಿಸಿ ಅವರು ಸಂಘಜನನಿಯಾದರು. ಗೃಹೀಭಕ್ತರಿಗೆ ಗೃಹಸ್ಥಧರ್ಮದ ಆದರ್ಶವನ್ನು ಎತ್ತಿತೋರಿಸಿದರೆ ಸಂನ್ಯಾಸಿಗಳಿಗೆ ಸಂನ್ಯಾಸಧರ್ಮದ ಆದರ್ಶವನ್ನು ನಡೆದು ತೋರಿಸಿದರು. ಅವರ ಜೀವನದಲ್ಲಿ ಕಾಣಬರುವ ತ್ಯಾಗವೈರಾಗ್ಯಗಳು, ಈಶ್ವರನಿರ್ಭರತೆ, ಸತ್ಯನಿಷ್ಠೆ, ನಿಸ್ಸ್ಪೃಹತೆ, ಜನಸಾಧಾರಣರಲ್ಲಿ ಪ್ರೀತಿ ಅನುಕಂಪೆಗಳು ಶ್ರೀಮಾತೆಯವರನ್ನು ಒಂದು ಅತ್ಯುನ್ನತ ಆದರ್ಶವ್ಯಕ್ತಿಯನ್ನಾಗಿ ಮಾಡಿವೆ. ಈ ಅರ್ಥದಲ್ಲಿ ಅವರು ನಿಜವಾಗಿ ರಾಮಕೃಷ್ಣ ಮಹಾಸಂಘದ ಮಾತೃಸ್ಥಾನದಲ್ಲಿ ರಾರಾಜಿಸುತ್ತಾರೆ. ಶ್ರೀಮಾತೆಯವರು ಒಮ್ಮೆ ಹೇಳಿದರು, "ನಾನು ನನ್ನ ಜೀವನವನ್ನು ಆದರ್ಶಮಯವನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಏನೇನು ಮಾಡಬೇಕೋ ಅದಕ್ಕಿಂತ ಹೆಚ್ಚಾಗಿಯೇ ಮಾಡಿದ್ದೇನೆ" ಎಂದು. ಆ ಆದರ್ಶದ ಸಾಂಘಿಕ ರೂಪವೇ ರಾಮಕೃಷ್ಣ ಮಹಾಸಂಘ. ಅದರ ಜೀವಾಳವೇ ಶ್ರೀಮಾತೆ ಶಾರದಾದೇವಿಯವರು. ❖

**ಪ್ರತಿಯೊಂದು ವಿಚಾರದಲ್ಲಿಯೂ ಶ್ರೀಮಾತೆಯವರು ಮಠದ ಸಾಧುಗಳಿಗೆ ಬೆಂಬಲ ನೀಡುತ್ತಿದ್ದರು. ಶ್ರೀರಾಮಕೃಷ್ಣರ ಜನ್ಮಭೂಮಿಯಾದ ಕಾಮಾರಪುಕುರದಲ್ಲಿ ಆಶ್ರಮ ಸ್ಥಾಪಿಸಿ ದೇವಸ್ಥಾನ ಕಟ್ಟಿಸುವ ವಿಷಯದಲ್ಲಿ ಶ್ರೀಮಾತೆಯವರ ಪಾತ್ರ ಹಿರಿದಾದುದು. ಆಗ ಅವರು ಉದ್ಬೋಧನದಲ್ಲಿದ್ದರು. ಒಂದು ದಿನ ರಾಮಲಾಲ, ಲಕ್ಷ್ಮೀದೇವಿ ಮತ್ತು ರಾಮಲಾಲನ ಮಗಳು ಇವರು ಶ್ರೀಮಾತೆಯವರನ್ನು ನೋಡಲು ಬಂದರು. ಅವರೆಲ್ಲ ಶ್ರೀರಾಮಕೃಷ್ಣರ ರಕ್ತಸಂಬಂಧಿಗಳು. ಮಾತಿನ ಸಂದರ್ಭದಲ್ಲಿ ಕಾಮಾರಪುಕುರದಲ್ಲಿ ದೇವಸ್ಥಾನವನ್ನು ಕಟ್ಟಿಸುವ ವಿಷಯವನ್ನು ಪ್ರಸ್ತಾಪಿಸಿದರು. ಲಕ್ಷ್ಮೀದೇವಿ ಕೇಳಿದಳು,"ದೇವಸ್ಥಾನ ಕಟ್ಟಿಸಿದರೆ ಅದು ನಮ್ಮ ಹದ್ದುಬಸ್ತಿನಲ್ಲೇ ಇರುತ್ತೆ ತಾನೆ? ಮತ್ತು ಇವರ (ರಾಮಲಾಲ ಮತ್ತು ಶಿವರಾಮ) ಮಕ್ಕಳೇ ಪೂಜೆ ಮಾಡಿಕೊಂಡು ಅಲ್ಲಿರುತ್ತಾರೆ ಅಲ್ಲವೆ?" ಅದಕ್ಕೆ ಶ್ರೀಮಾತೆಯವರಂದರು: "ಅದು ಹೇಗೆ ಸಾಧ್ಯ? ಅವರೆಲ್ಲ ಸಾಧುಗಳು; ಅವರಿಗೆ ಜಾತಿ ವಿಚಾರವುಂಟೆ? ಅನೇಕ ಕಡೆಗಳಿಂದ ಜನ ಬರುತ್ತಾರೆ, ವಿದೇಶೀಯರೂ ಬರುತ್ತಾರೆ, ಅಲ್ಲಿ ಇಳಿದುಕೊಳ್ಳುತ್ತಾರೆ, ಊಟಮಾಡುತ್ತಾರೆ. ನಾವು ಎಲ್ಲ ಭಕ್ತರನ್ನೂ ಸೇರಿಸಿಕೊಳ್ಳಬೇಕಾಗಿದೆ. ನೀವು ಸಂಸಾರಿಗಳು, ನಿಮಗೆ ಮಕ್ಕಳು, ಮರಿ, ಮದುವೆ, ಮುಂಜಿ ಎಲ್ಲ ಇರುತ್ತೆ. ನೀವು ಅವರೊಡನೆ ಇರಲಾಗುವುದೆ?"**

**ಸ್ವಲ್ಪಹೊತ್ತಿನ ನಂತರ ಶ್ರೀಮಾತೆಯವರು ಮತ್ತೆ ಮುಂದುವರಿಸಿದರು : "ಬೇಲೂರು ಮಠದ ಸಾಧುಗಳು ಜನ್ಮಸ್ಥಳವನ್ನೂ ಮತ್ತು ಮುಂಬರುವ ದೇವಸ್ಥಾನವನ್ನೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಅವರು ರಾಮಲಾಲ ಮತ್ತಿತರರಿಗೆ ಪ್ರತ್ಯೇಕ ಮನೆ ಕಟ್ಟಿಸಿಕೊಡಬೇಕು. ಮನೆದೇವತೆಗಳಾದ ರಘುವೀರ ಮತ್ತು ಶೀತಳಾ ಇವರಿಗೂ ದೇವಸ್ಥಾನ ಕಟ್ಟಿಸಬೇಕು. ಇಲ್ಲಿಯ ಪೂಜೆ ಕುಟುಂಬದವರಿಗೆ ಸೇರಿದ್ದು." ಇದಕ್ಕೆ ಎಲ್ಲರೂ ಒಪ್ಪಿಗೆಯಿತ್ತರು. ಮುಂದೆ ಇದರಂತೆಯೇ ವ್ಯವಸ್ಥೆ ಮಾಡಲಾಯಿತು.** ❖